ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ:ರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **90/2025**

ಸಿ ಡಬ್ಲ್ಯೂ:-**27** /ಪಿ ಡಬ್ಲ್ಯೂ :-**03**

ಸಾಕ್ಷಿದಾರರ ಹೆಸರು : ಯತಿರಾಜ್ ಬಿ.ವಿ.
ತಂದೆಯ ಹೆಸರು : ಬಿ.ಎಂ. ವೆಂಕಟೆಗೌಡ
ವಯಸ್ಸು : **76** ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಹೊನ್ನಾಪುರ ಶಿವಮೊಗ್ಗ ತಾಲೂಕು

ದಿನಾಂಕ: **27-04-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

1. ಚಾಸಾ 1 ನನ್ನ ಮಗ ಇರುತ್ತಾರೆ. ಚಾಸಾ 2 ನನ್ನ ಮಗನ ಸ್ನೇಹಿತನಿರುತ್ತಾರೆ. ಆರೋಪಿ 2 ರಿಂದ 4 ರವರು ಪರಿಚಯವಿರುತ್ತದೆ. ನಾನು ಗಾಜನೂರು ಗ್ರಾಮದ ಸರ್ವೆ ನಂ. 29, 30, 50, 51, 52 ಮತ್ತು 53 ರಲ್ಲಿ 16 ಎಕರೆ 7 ಗುಂಟೆ ಅಡಿಕೆ ತೋಟ ಹೊಂದಿದ್ದು, ಹಾಗೂ ಅದರಲ್ಲಿ ನಾನು 17,000 ಕೋಳಿಗಳನ್ನು ಸಾಕಾಣಿಕೆ ಮಾಡುವ ಪೌಲ್ಟ್ರಿ ಫಾರಂ ಹಾಗೂ ಪಾಲಿ ಹೌಸ್ ಇರುತ್ತದೆ. ನಾನು ಸಾರಿಯಾ ಗ್ರಾಮದ 8 ಎಕರೆ 15 ಗುಂಟೆಯ ಅಡಿಕೆ ತೋಟವನ್ನು ಖರೀಧಿಸಿರುತ್ತೇನೆ. ಸದರಿ ತೋಟವನ್ನು ನನ್ನ ಚಿಕ್ಕಮಗನಾದ ಚಾಸಾ 1 ಹಾಗೂ ಆತನ ಜೊತೆ ಕೆಲಸಗಾರರು ನೋಡಿಕೊಳ್ಳುತ್ತಿದ್ದು, ಸದರಿ ಜಮೀನುಗಳಿಂದ ವಾರ್ಷಿಕ ನಮಗೆ 80 ಲಕ್ಷ ಆದಾಯ ಬರುತ್ತಿತ್ತು. ಸಾರಿಯಾ ಗ್ರಾಮದ ಜಮೀನಿಗೆ ನನ್ನ ಮಗ ಚಾಸಾ 1 ಬಂದು ಹೋಗುವುದು ಹಾಗೂ ಸದರಿ ಜಮೀನನ್ನು ನೋಡಿಕೊಳ್ಳುತ್ತಿದ್ದನು. ನಮ್ಮ ಜಮೀನಿನ ಪಕ್ಕದಲ್ಲಿ ಆರೋಪಿ 2 ರವರ ಜಮೀನು ಇದ್ದು, ನನ್ನ ಮಗ ನಂದನ್ ಜೊತೆ ಓಡಾಡುತ್ತಿದ್ದು ಅವರ ವ್ಯವಹಾರಗಳ ಬಗ್ಗೆ ನನಗೆ ಗೊತ್ತಾಗುತ್ತಿರಲಿಲ್ಲ. ನಂತರ ನನ್ನ ಮಗ ರೈಸ್ ಪುಲ್ಲಿಂಗ್ ವ್ಯವಹಾರ ಮಾಡುವ ಬಗ್ಗೆ ನನಗೆ ಹೇಳಿದ್ದು, ನಾನು ಸದರಿ ವ್ಯವಹಾರ ಮಾಡುವುದು ಸರಿಯಲ್ಲ ಎಂದು ಆತನಿಗೆ ಬೈದಾಡಿದ್ದು, ಆಗ ನನ್ನ ಮಗ ನಾನು ಹೇಳಿದ್ದನ್ನು ಒಪ್ಪದೇ ಆತನು ನನಗೆ ದೊಡ್ಡ ಸ್ವಾಮೀಜಿಯವರು ನಿನ್ನ ಹೆಸರಿನಲ್ಲಿ ಜಾತಕ ಬಲ ಬಂದಿದೆ ರೈಸ್ ಪುಲಿಂಗ್ ವ್ಯವಹಾರ ಮಾಡುವಂತೆ ಹೇಳಿರುತ್ತಾರೆ ಎಂದು ನನಗೆ ಹೇಳಿದ್ದನು.

2. ನಾನು ನನ್ನ ಮಗನನ್ನು ಯಾರ ಜೊತೆ ಸೇರಿಕೊಂಡು ವ್ಯವಹಾರ ಮಾಡುತ್ತೀಯಾ ಎಂದು ಕೇಳಿದ್ದಕ್ಕೆ ಆತನು ನಂದನ್ ಹಾಗೂ ವಿಜಯಕುಮಾರ್ ಇವರ ಜೊತೆ ವ್ಯವಹಾರ ಮಾಡುವುದಾಗಿ ತಿಳಿಸಿದನು. ನನ್ನ ಮಗ ಸದರಿ ರೈಸ್ ಪುಲಿಂಗ್ ವ್ಯವಹಾರಕ್ಕೆ 1 ಕೋಟಿ ಖರ್ಚು ಆಗುತ್ತಿದ್ದು ನಾವೆಲ್ಲರೂ ಸೇರಿ ಹಣ ಹಾಕುತ್ತೇವೆ ಎಂದು ಹೇಳಿದನು. ಸದರಿ ವಿಚಾರವಾಗಿ ನಮ್ಮ ಮನೆಯಲ್ಲಿ ಗಲಾಟೆಯಾಗಿದ್ದು, ನನ್ನ ಮಗ ತನ್ನ ಹಿಸ್ಸೆಯ ಬಾಬ್ತು ಜಮೀನನ್ನು ಕೊಡುವಂತೆ ಕೇಳಿದನು. ಆಗ

ನನ್ನ ಹೆಂಡತಿ ಅವನ ಇಷ್ಟದಂತೆ ಬದುಕಲಿ ಬಿಡಿ ಎಂದು ಹೇಳಿದಳು. ನಂತರ ನನ್ನ ಮಗ ಸದರಿ ರೈಸ್ ಪುಲಿಂಗ್ ಅನ್ನು ಪರೀಕ್ಷೆ ಮಾಡಲು ಇಂಟರ್ ನ್ಯಾಷನಲ್ ಕಂಪನಿಯವರು ಬರುತ್ತಾರೆ. ಸದರಿ ವಸ್ತುವನ್ನು ಮಹಮದ್ ರಫೀಕ್ ಎನ್ನುವವರು ಪರೀಕ್ಷೆ ಮಾಡುತ್ತಾರೆ ಎಂದು ನನಗೆ ತಿಳಿಸಿದನು. ಆಗ ನಾನು ಬೇಡ ಅಂತ ಹೇಳಿದ್ದಕ್ಕೆ ಆತನು ಜಿಗುಪ್ಸೆಗೊಂಡಿದ್ದನು. ಆಗ ನಾನು ನಿನ್ನ ಪಾಲಿನ 50 ಲಕ್ಷ ಕೊಡುತ್ತೇನೆ ಮುಂದೆ ಹಣ ಕೇಳದಂತೆ ಹೇಳಿದೇನು.

3. ನಾನು ಋಷ್ಯಶೃಂಗ ಅಡಿಕೆ ಮಂಡಿಯಲ್ಲಿ ವ್ಯಾಪಾರ ಮಾಡುತ್ತಿದ್ದು ನಾನು ಅವರ ಬಳಿ 50 ಲಕ್ಷ ಹಣ ಕೇಳಿದ್ದು, ಅವರು ನನ್ನ ಕರ್ಣಾಟಕ ಬ್ಯಾಂಕ್ ಖಾತೆಗೆ 49,99,940/- ಹಣವನ್ನು ನನ್ನ ಖಾತೆಗೆ ಹಾಕಿದ್ದು ಹಾಗೂ 50,000 ನಗದು ಹಣವನ್ನು ನನಗೆ ಕೊಟ್ಟಿದ್ದು, ನಾನು ಸದರಿ ಹಣವನ್ನು ದಿನಾಂಕ: 28.10.2016 ರಂದು ಕೊಟ್ಟಿರುತ್ತೇನೆ. ಸದರಿ ಹಣವನ್ನು ತೆಗೆದುಕೊಂಡು ನನ್ನ ಮಗ ರೈಸ ಪುಲಿಂಗ್ ವ್ಯವಹಾರಕ್ಕೆ ಕೊಡುವ ಸಲುವಾಗಿ ಆತನ ಜೊತೆ ಇಂತಿಯಾಜ್ ಸಹ ಬೆಂಗಳೂರಿಗೆ ಹೋಗಿರುತ್ತಾರೆ. ದಿನಾಂಕ: 29.10.2016 ರಂದು ಪುನಃ ವಾಪಸ್ಸು ಊರಿಗೆ ಬಂದಾಗ ನಾನು ನನ್ನ ಮಗನನ್ನು ಸದರಿ ರೈಸ್ ಪುಲಿಂಗ್ ವ್ಯವಹಾರದ ಬಗ್ಗೆ ಹೇಳಲಾಗಿ ನನ್ನ ಮಗ 50,50,000/-, ಇಂತಿಯಾಜ್ 50,000/- ಹಾಗೂ ವಿಜಯಕುಮಾರ್ 23,00,000,/- ಒಟ್ಟೂ 74,00,000/- ಹಣವನ್ನು ಕಂಪನಿಗೆ ಕಟ್ಟಿ ಬಂದಿರುವುದಾಗಿ ನನ್ನ ಮಗ ಹೇಳಿದನು. ನಂತರ 2-3 ದಿನಗಳ ನಂತರ ನನ್ನ ಮಗನನ್ನು ಬರುವಂತೆ ಹೇಳಿದ್ದನು ಎಂದು ಆತನು ಮಹಮದ್ ರಫಿಕ್ ಮತ್ತು ದೊಡ್ಡ ಸ್ವಾಮೀಜಿಯನ್ನು ಭೇಟಿಯಾಗಲು ಬೆಂಗಳೂರಿಗೆ ಹೋಗಿರುತ್ತಾನೆ.

4. ಬೆಂಗಳೂರಿನಿಂದ ವಾಪಸ್ಸು ಬಂದಾಗ ಸದರಿ ರೈಸ್ ಪುಲಿಂಗ್ ವಸ್ತು ರೈತರಿಗೆ ಸಂಬಂಧಿಸಿದ ಜಮೀನಿನಲ್ಲಿದ್ದು ಸದರಿ ವಸ್ತುವನ್ನು ಕೊಡಲು ರೂ. 10 ಕೋಟಿ ಕೇಳುತ್ತಿದ್ದಾರೆ ಎಂದು ನನ್ನ ಮಗ ತಿಳಿಸಿದ್ದನು. ನಂತರ ನಾನು ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದಾಗ ನನ್ನ ಮಗ ಒಂದು ತಿಂಗಳು ಕಾಲ ಮಂಕಾಗಿ ಇದ್ದನು. ನಂತರ ನನ್ನ ಮಗನಿಗೆ ದೊಡ್ಡ ಸ್ವಾಮೀಜಿ ಫೋನ್ ಮಾಡಿ ರಫೀಕ ಈತನಿಗೆ ಬರುವಂತೆ ತಿಳಿಸಿದ್ದು ನನ್ನ ಮಗ ರಫೀಕ್ ಈತನಿಗೆ ಫೋನ್ ಮಾಡಿ ದೊಡ್ಡ ಸ್ವಾಮೀಜಿಯವರೇ ರೈತರಿಗೆ ಹಣ ಕೊಟ್ಟು ಸಮಾಧಾನ ಮಾಡುತ್ತಾರೆ ಬರುವಂತೆ ನನ್ನ ಮಗನಿಗೆ ಹೇಳಿದ್ದು, ರಫೀಕ ಇವರು ಸದರಿ ರೈಸ್ ಪುಲಿಂಗ್ ವಸ್ತುವನ್ನು ಹೊರತೆಗೆಯಲು ದೊಡ್ಡ ಜಾಕೆಟ್ ಬೇಕಾಗುತ್ತದೆ. ಅದಕ್ಕೆ 45 ಲಕ್ಷ ಖರ್ಚು ಆಗುತ್ತದೆ ಎಂದು ತಿಳಿಸಿದರು. ಆಗ ನನ್ನ ಮಗ ಸದರಿ ವಿಚಾರವನ್ನು ನನಗೆ ತಿಳಿಸಿದಾಗ ನಾನು ಆತನಿಗೆ ಬೈದಿರುತ್ತೇನೆ ಮತ್ತು ಆ ವಸ್ತು ಎಲ್ಲಾ ಸುಳ್ಳು ಎಂದು ಹೇಳಿರುತ್ತೇನೆ.

5. ನಂತರ ನನ್ನ ಮಗ ನನಗೆ 20 ಲಕ್ಷ ಹಣವನ್ನು ಕೊಡುವಂತೆ ಹಾಗೂ ಉಳಿದ ಹಣವನ್ನು ವಿಜಯಕುಮಾರ ಮತ್ತು ಇಂತಿಯಾಜ್ ಇವರು ಹಾಕುತ್ತಾರೆ ಎಂದು ನನಗೆ ಕಾಟ ಕೊಟ್ಟ ಕಾರಣ ನಾನು ಮಹಾಬಲೇಶ್ವರ ಕಚೆಯಿಂದ ರೂ.10 ಲಕ್ಷ ಹಣವನ್ನು ಹಾಗೂ ರಾಜೇಶ್ ಇವರ ಕಡೆಯಿಂದ ರೂ.10

ಲಕ್ಷ ಹಣ ಪಡೆದುಕೊಂಡು ಸದರಿ ಹಣವನ್ನು ನನ್ನ ಮಗನ ಜೊತೆ ಕಳುಹಿಸುವುದು ಸೂಕ್ತ ಅಲ್ಲ ಎಂದು ನಾನು, ನನ್ನ ಮಗನ ಜೊತೆ 20 ಲಕ್ಷ ಹಣವನ್ನು ತೆಗೆದುಕೊಂಡು ಬೆಂಗಳೂರಿಗೆ ನಾನು, ನನ್ನ ಮಗ, ಇಂತಿಯಾಜ ಮತ್ತು ವಿಜಯಕುಮಾರ್ ಜೊತೆ ಹೋಗಿರುತ್ತೇನೆ. ನನ್ನ ಮಗ ಮಹಮದ್ ರಫೀಕ್ ಇವರನ್ನು ಬೆಂಗಳೂರಿನ ಲಲಿತ್ ಮಹಲ್ ಹೋಟೇಲ್ ನಲ್ಲಿ ಪರಿಚಯ ಮಾಡಿಸಿರುತ್ತಾನೆ. ನಂತರ ಅಲ್ಲಿ ಸದರಿ ರೈಸ್ ಪುಲಿಂಗ್ ವ್ಯವಹಾರ ಮಾಡಿದರೆ ಸಾಕಷ್ಟು ಲಾಭ ಇರುತ್ತದೆ. ನಮಗೆ ಸದರಿ ವಸ್ತುವನ್ನು ಪರೀಕ್ಷೆ ಮಾಡಲು 2 ದಿನಗಳ ಅವಕಾಶ ನೀಡಬೇಕು ಎಂದು ಕೇಳಿದರು, ಆಗ ನನ್ನ ಮಗ 20 ಲಕ್ಷ ಹಣವನ್ನು ಕೊಟ್ಟಿದ್ದು ಅದನ್ನು ಅವರು ಪಡೆದುಕೊಂಡಿರುತ್ತಾರೆ.

6. 2-3 ದಿನಗಳ ನಂತರ ನನ್ನ ಮಗ ಹೊಸದುರ್ಗಕ್ಕೆ ಹೋಗುವುದಾಗಿ ಹೇಳಿದಾಗ ನಾನು ಸಹ ನನ್ನ ಮಗ, ಇಂತಿಯಾಜ್ ಇವರ ಜೊತೆ ಹೊಸದುರ್ಗಕ್ಕೆ ಹೋಗಿರುತ್ತೇನೆ. ನಂತರ ಸದರಿ ಸ್ಥಳಕ್ಕೆ ಮಹಮದ್ ರಫೀ ಹಾಗೂ ಇಬ್ಬರು ವ್ಯಕ್ತಿಗಳು ಫಾರ್ಚುನರ್ ಕಾರಿನಲ್ಲಿ ಅಲ್ಲಿಗೆ ಬಂದಿದ್ದು, ಆಗ ನನ್ನ ಮಗನನ್ನು ಕರೆದು ಸದರಿ ವಸ್ತುವನ್ನು ವಿದೇಶಕ್ಕೆ ಕಳುಹಿಸುವ ಸಲುವಾಗಿ ಕೆಲವೊಂದು ಖಾಲಿ ಕಾಗದಪತ್ರಗಳಿಗೆ ಸಹಿ ಯನ್ನು ಪಡೆದುಕೊಂಡಿರುತ್ತಾರೆ. ಹಾಗೂ ಪರೀಕ್ಷೆ ಮಾಡುವವರನ್ನು ಹೊರತುಪಡಿಸಿ ಬೇರೆ ಯಾರನ್ನು ಒಳಗೆ ಬಿಡುವುದಿಲ್ಲ ಎಂದು ಹೇಳಿ ನಮ್ಮನ್ನು ಅಲ್ಲಿಯೇ ಬಿಟ್ಟು ಹೋಗಿರುತ್ತಾರೆ. ಹಾಗೂ ಸದರಿ ವಸ್ತುವನ್ನು ಪರೀಕ್ಷೆ ಮಾಡಿ ಬರುವುದಾಗಿ ಹೇಳಿರುತ್ತಾರೆ. ನಾವು ಒಂದು ಗಂಟೆ ಅಲ್ಲೇ ಕಾದಿದ್ದು ಆಗ ನಮ್ಮ ಮಗ ನಾವಿದ್ದ ಬಳಿಗೆ ಕಾರಿನಲ್ಲಿ ಬಂದಿದ್ದು, ಕಾರಿನಿಂದ ಇಳಿಯುವಾಗ ನನ್ನ ಮಗನ ಕೈ ರೆಟ್ಟೆಗೆ ಹೊಡೆತ ಬಿದ್ದಿದ್ದು ಫಾರ್ಚುನರ್ ಕಾರಿನ ಹಿಂದಿನ ಗ್ಲಾಸ್ ಒಡೆದಿತ್ತು. ಆಗ ನಮ್ಮನ್ನು ಗಲಾಟೆಯಾಗುತ್ತೆ ಮುಂದೆ ಹೋಗುವಂತೆ ಹೇಳಿದ್ದು ನಾವು ಹುಳಿಯಾರ ಗ್ರಾಮಕ್ಕೆ ಬಂದಿರುತ್ತೇವೆ. ನಂತರ ಫಾರ್ಚುನರ್ ನಲ್ಲಿ ರಫೀಕ್ ಮತ್ತು ಇತರರು ಸದರಿ ಕಾರನ್ನು ಬೆಂಗಳೂರು ಕಡೆಗೆ ತಿರುಗಿಸಿ ನಿಮ್ಮ ಪ್ರಾಣ ಉಳಿಸಿಕೊಳ್ಳಿ ಎಂದು ನಮಗೆ ಹೇಳಿದರು. ನಾನು ಈ ಘಟನೆಯ ಕುರಿತು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಆ ದಿನ ನನ್ನ ಮಗನ ಕಡೆಯಿಂದ ಹಣ ಪಡೆದುಕೊಂಡು ಮೋಸ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿಯು ಫಾರ್ಚುನರ್ ಕಾರಿನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿರುತ್ತದೆ.
ಪಾಟೀ ಸವಾಲು ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.

ಸಾಕ್ಷಿದಾರರ ಸಹಿ: